



ಎಡದಿಂದ ಬಲಕ್ಕೆ :

1. ಸೊನ್ನೆ ಸಿಕ್ಕೊಡನೆ ಆವೇಶ ತೋರುವ ಪರಿಸ್ಥಿತಿ ಬಂತು (4)
3. ಶೂರರನ್ನೆಲ್ಲ ಒಟ್ಟು ಗೂಡಿಸುವ ಕೆಲಸ ಕಷ್ಟದ್ದೇನಲ್ಲ (3)
4. ರಾಘವನ ಹಸ್ತಕ್ಕೆ ಒಳ್ಳೇ ಕೌಶಲ್ಯ ಇದೆ (3)
6. ಹೆಗ್ಗಣಗಳನ್ನೆಲ್ಲ ದೂರ ಕಳಿಸಿದ್ದೇ ಆಕೆಯ ಹೆಚ್ಚುಗಾರಿಕೆ (4)
7. ತಳಹದಿ ಹಾಕುವ ಕೆಲಸಕ್ಕೆ ಎಳ್ಳು ನೀರು (4)
8. ಮೊಹರಿನಲ್ಲಿ ಕೆತ್ತಿರುವುದು ವಿಷ್ಣುವಿನ ಹೆಸರು (4)
10. ಬರಸೆಳೆದು ನೀಡಿದ್ದು ರುಚಿತುಂಬಿದ ಕದಳೀಫಲ (4)
12. ಅಭ್ಯುದಯವನ್ನು ಸಾಧಿಸಿದವನಿಗೆ ಹೊಸ ಹೆಸರು (4)
14. ಉಭಯ ರೀತಿಗಳಲ್ಲೂ ಅವರಿಗೆ ಜ್ವಾಲೆಯದೇ ಹೆದರಿಕೆ (4)
16. ಲಕ್ಷಿಸಲು ಸಾಧ್ಯವಿಲ್ಲ ಎಂಬುದನ್ನು ಇಲ್ಲಿ ಬರೆದಿಡು (3)
17. ಮಜ್ಜನಕ್ಕೆ ತುಂಬ ಪ್ರಶಸ್ತ , ಗಂಗೆ ಜೊತೆಗಿನ ಪುಣ್ಯನದಿ (3)
18. ಕುಲೋದ್ಧಾರಕನ ಕೈಯಲ್ಲಿ ಇಡೀ ವಂಶದ ಐಶ್ವರ್ಯ (4)

ಮೇಲಿಂದ ಕೆಳಕ್ಕೆ :

1. ಹೊಲದ ಕೆಲಸ ಸುಲಭ ಮಾಡಲು ನಿಮ್ಮ ಅಭಿಪ್ರಾಯ ? (3)
2. ಕಲಶ ಬೇಕೆಂದು ಕೇಳಿದರೆ ಸರಳು ತಂದ (3)
3. ಸರಿ ಹೊಂದಿಸುವ ಕಾರ್ಯಕ್ಕೆ ಅಣ್ಣನೋ , ತಮ್ಮನೋ ಸರಿ (4)
5. ಒಲ್ಲೆ ಎನ್ನುವವರಿಗೆ ಏಕೆ ನೀಡುವಿರಿ ಇಂಥ ಸುಂದರ ಬಳ್ಳಿ ? (3)
7. ಸತ್ಕಾರ ನೀಡ ಹೋದವರಿಗೆ ಎಂತಹ ತಾತ್ಸಾರ ! (4)
9. ಮಹನೀಯನಂತೆ ನಟಿಸುತ್ತಿದ್ದಾನೆ – ಬುದ್ಧಿ ಇಲ್ಲದವ (4)
11. ಭೂಮಿಯನ್ನು ಆವರಿಸಿರುವ ಆಕಾಶದಲ್ಲಿ ಮಾತು ! (3)
13. ಭೀಮನ ಕಣ ಕಣದಲ್ಲೂ ಸಾಮಾನ್ಯವಾದದ್ದಲ್ಲ ಆತ್ಮ ಗೌರವ (4)
14. ವಾಸಕ್ಕೆ ನಿರ್ಮಿಸುವ ಮನೆಗೆ ಮರಳು ಬೇಕೇ ಬೇಕು (3)
15. ಆಂಜನೇಯನ ಕೃಪೆಗಾಗಿ ಹೀಗೊಂದು ಯಜ್ಞ (3)

## 03-12-15ರ ಉತ್ತರಗಳು

ಎಡದಿಂದ ಬಲಕ್ಕೆ:

1. ಕುಪಿತ 3. ಆದೇಶ 4. ಗರಿಮೆ 6. ಅಮಾಯಕ 7. ಜಗದೀಶ ; 9. ಲಗ್ನಕಾಲ 11. ಅಪಸ್ವರ 15. ಕಡಲು 16. ಡಮರು 17. ಮೆರಗು

ಮೇಲಿಂದ ಕೆಳಕ್ಕೆ:

1. ಕುಶಲ 2. ತಗಡು 3. ಆಶಯ 5. ಮೆದುಗ 6. ಅನಲ 8. ಶರ್ಕರ 10. ಕಾಯಕ 12. ಪಸರು 13. ಒಲುಮೆ 14. ಕೊಡಗು

# ಎಟಾಲ್ ರೂಪುಗೊಳ್ಳುವುದು ಹೇಗೆ?

ಕಡಲಿನಾವಾರದಲ್ಲಿ ಉಂಗುರಾಕಾರದ ಒಂದು ಹವಳದ ದಿಬ್ಬ–ಒಂದು ನೀರಿನಾವಾರವನ್ನು ಸುತ್ತುವರೆದ ದಿಬ್ಬ.

'ಲಗೂನ್' ಎಂದೇ ಕರೆವ ಆ ವಿಶಾಲ ಜಲಾವಾರವನ್ನು ಪರಿವರಿಸಿದ ಅಗಲವಾದ ಕೋಟೆಗೋಡೆಯಂತಹ ಆ ದಿಬ್ಬ ಒಂದೇ ದ್ವೀಪದಂತೆ ಅವಿಚ್ಛಿನ್ನ ಅಥವಾ ಬಹು ದ್ವೀಪಗಳಾಗಿ ಭಿನ್ನ ಭಿನ್ನ. ಇಂತಹ ವಿಚಿತ್ರ, ವಿಶಿಷ್ಟ ನಿರ್ಮಿತಿಯೇ 'ಎಟಾಲ್'(**Atoll**). ವಿಸ್ಮಯ ಏನೆಂದರೆ ಕೆಲವೇ ಚದರ ಕಿಲೋಮೀಟರ್ ಗಳಿಂದ ಸಾವಿರಾರು ಚದರ ಕಿಲೋಮೀಟರ್ ವಿಸ್ತಾರದವರೆಗಿನ ಲಗೂನ್ ಗಳನ್ನು ಸುತ್ತುವರೆದಿರುವ ಎಟಾಲ್‌ಗಳಿವೆ. ಹಾಗೆಯೇ ಹತ್ತಾರು, ನೂರಾರು ದ್ವೀಪಗಳ ಸಮೂಹಗಳೇ ಆಗಿರುವ ಎಟಾಲ್‌ಗಳೂ ಇವೆ. ಮಾಲ್ಡೀವ್ಸ್, ಟುವಾಲು, ಕಿರಿಬಾತಿ, ಟುವಮೋಟು, ಲಕ್ಷದ್ವೀಪ, ಮಾರ್ಶಲ್ ದ್ವೀಪಗಳು... ಇತ್ಯಾದಿ ಎಲ್ಲವೂ ಎಟಾಲ್‌ಗಳೇ ಆಗಿವೆ. ಎಟಾಲ್‌ಗಳು ಮೈದಳೆವ ವಿಧಾನ – ಅದು ನಿಸರ್ಗದ ಪರಮ ಸೋಜಿಗದ ಒಂದು ಕಾರ್ಯಕ್ರಮ.

ಎಟಾಲ್‌ಗಳು ರೂಪುಗೊಳ್ಳಲು ಮೂಲತಃ ಕಡಲಿನೊಳಗಿನ ಜ್ವಾಲಾಮುಖಿಗಳೇ ಕಾರಣ. ಸಾಗರ ತಳದ ಅಗ್ನಿಪರ್ವತವೊಂದು ಬಾಯ್ದೆರೆದು ಶಿಲಾಪಾಕ ಹರಿಸಿ, ಅದು ತಣಿದು, ಹಾಗೆ ಮತ್ತೆ ಮತ್ತೆ ನಡೆದಾಗ ಪ್ರತಿ ಬಾರಿಯೂ ಆ ಅಗ್ನಿಪರ್ವತದ ಉನ್ನತಿ ಅಧಿಕಗೊಳ್ಳುತ್ತ ಕಡೆಗೆ ಜ್ವಾಲಾಮುಖಿ ನೀರಿನಿಂದ ಹೊರಕ್ಕೆ ತಲೆಯೆತ್ತುತ್ತದೆ. ಹಾಗೆ ಬೆಳೆದು ನಿಂತು ಮೃತವಾಗುವ ಜ್ವಾಲಾಮುಖಿಯ ಮೈಮೇಲೆ ಶಿಖರದ ಸುತ್ತಲೂ ನೀರಿನೊಳಗೆ ಹವಳದ ಜೀವಿಗಳು ಸುಣ್ಣದ ಕೋಟೆ ನಿರ್ಮಿಸತೊಡಗುತ್ತವೆ. ಲಕ್ಷಾಂತರ ವರ್ಷಗಳಲ್ಲಿ ಈ ಕೋಟೆ ನೀರಿನ ಮಟ್ಟದವರೆಗೂ ಬೆಳೆಯುತ್ತದೆ. ಆ ವೇಳೆಗೆ ಕಡಲಿನ ಅಲೆಗಳ ನಿರಂತರ ತಾಡನದಿಂದ ಜ್ವಾಲಾಮುಖಿಯ ಶಿಖರ ಶಿಥಿಲಗೊಂಡು




ಕುಸಿದು ನೀರಲ್ಲಿ ಮುಳುಗಿರುತ್ತದೆ. ಆಗ ಅದನ್ನು ಪರಿವರಿಸಿದ್ದ ಹವಳದ ಕೋಟೆಯ ಒಳಗೊಂದು ಅಲೆರಹಿತ ಪ್ರಶಾಂತ ಸರೋವರ ಸದೃಶ ಜಲಾವಾರ (ಲಗೂನ್) ರೂಪುಗೊಳ್ಳುತ್ತದೆ. ಕೋಟೆ ರೂಪದ ಎಟಾಲ್ ನ ಹೊರ ಮುಖ ಕೂಡ ಕಡಲಿನ ಅಲೆಗಳಿಂದ ಛಿದ್ರಗೊಳ್ಳುತ್ತ ಆ ದ್ರವ್ಯವೆಲ್ಲ ಕಲ್ಲು ತುಣುಕು ಮತ್ತು ಮರಳಿನ ರೂಪದಲ್ಲಿ ಕೋಟೆ ಗೋಡೆಯ ಮೇಲೇ ಸಂಗ್ರಹಗೊಳ್ಳುತ್ತ ಕಡಲ ಮೇಲ್ಮೈಯಿಂದ ಕೆಲವು ಮೀಟರ್ ಎತ್ತರದವರೆಗೂ ಬೆಳೆದು ಎಟಾಲ್ ದ್ವೀಪ ರೂಪ ತಾಳುತ್ತದೆ. ಹೊರಗಿನ ಪಾರ್ಶ್ವದಲ್ಲಿ ಉಗ್ರ ಸಾಗರ, ಒಳಗಿನ ಪಾರ್ಶ್ವದಲ್ಲಿ ಪ್ರಶಾಂತ ಲಗೂನ್ ಜಲಾವಾರ– ಇದು ಎಟಾಲ್ ನ ವೈಶಿಷ್ಟ್ಯ. ಕೆಲವಾರು ಕಿಲೋಮೀಟರ್ ಅಗಲದ ಕೋಟೆಯಂಥ ಗೋಡೆಯಲ್ಲಿ ಅಲ್ಲಲ್ಲಿ ತೆರೆದು ಉಳಿವ ನಾಲೆಗಳೇ ಹೊರಕಡಲಿಗೂ, ಒಳ ಲಗೂನ್‌ಗೂ ನಡುವಣ ಸಂಪರ್ಕ ಹಾದಿಗಳಾಗಿರುತ್ತವೆ.

ಎಟಾಲ್‌ಗಳಲ್ಲಿ ಸಿಹಿ ನೀರು ಅಲಭ್ಯ; ಕೃಷಿಯಂತೂ ಅಸಾಧ್ಯ. ಹಾಗಾಗಿ ಎಟಾಲ್‌ಗಳಲ್ಲಿ ಜನವಸತಿ ಅತಿ ವಿರಳ. ಭೂ ಸಮಭಾಜಕದ ಆಸುಪಾಸಿನಲ್ಲಿ, ಅದರಲ್ಲೂ ಶಾಂತ ಸಾಗರದಲ್ಲಿ ಎಟಾಲ್ ಗಳ ಸಂಖ್ಯೆ ಗರಿಷ್ಠ. ಮಿಲಿಯಾಂತರ ವರ್ಷಗಳಲ್ಲಿ ಮೈದಳೆವ ಎಟಾಲ್‌ಗಳಿಗೆಲ್ಲ ದ್ವಿವಿಧ ಅಪಾಯಗಳು ನಿಶ್ಚಿತ.

■ ಎನ್. ವಾಸುದೇವ್